ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

**ಆಯುಕ್ತರ ಕಛೇರಿ,ಹೊಸ ಸಾರ್ವಜನಿಕ ಕಟ್ಟಡಗಳು, ನೃಪತುಂಗ ರಸ್ತೆ, ಬೆಂಗಳೂರು-560001**

**ಸಂಖ್ಯೆ:ಸಿ7[ 4 ]ಪ್ರಾಶಿಅ.1-5 ಆಂ.ಮಾ.ಪ. (ಮೈಸೂರು) 01/2015-16** **ದಿನಾಂಕ: 10/06/2015**

**-: ಜ್ಞಾಪನ :-**

**ವಿಷಯ :** ಘನ ಸರ್ವೋಚ್ಚ ನ್ಯಾಯಾಲಯದ ಹಾಗೂ ರಾಜ್ಯ ಉಚ್ಚ ನ್ಯಾಯಾಲಯದ ತೀರ್ಪಿನನ್ವಯ, 1994ರ ಭಾಷಾ ನೀತಿಯ ಸರ್ಕಾರದ ಆದೇಶದ ತರುವಾಯದಲ್ಲಿ, 1994 ರ ನಂತರ ಪ್ರಾರಂಭಗೊಂಡ ಕನ್ನಡ ಮಾಧ್ಯಮದ ಶಾಲೆಗಳು, ವಿವಿಧ ಹಂತಗಳಲ್ಲಿ, ವಿವಿಧ ರಿಟ್ ಅರ್ಜಿ ಇತ್ಯಾದಿ ಮುಖಾಂತರ ಆಂಗ್ಲ ಮಾಧ್ಯಮದ ಬೋಧನೆಗೆ ಅವಕಾಶ ಕೋರಿದ್ದ ಪ್ರಕರಣಗಳಲ್ಲಿ, **ಮೈಸೂರು ಜಿಲ್ಲೆ** ಗೆ ಸಂಬಂಧಪಟ್ಟಂತೆ, 2015-16 ನೇ ಸಾಲಿನಿಂದ 1-5 ನೇ ತರಗತಿ ಆಂಗ್ಲ ಮಾಧ್ಯಮ ಬೋಧನೆಗೆ ಪರಿವರ್ತನೆ ನೀಡುವ ಬಗ್ಗೆ – 22 **ಪ್ರಸ್ತಾವನೆಗಳು**

**ಉಲ್ಲೇಖ:** 1. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ: 14363/94 ಹಾಗು ಒಟ್ಟಾಗಿ ಆಲಿಸಲಾದ ಹಲವು ಪ್ರಕರಣಗಳಲ್ಲಿ ದಿ: 02.07.2008 ರಂದು ಹೊರಡಿಸಿರುವ ತೀರ್ಪು. ಮನವಿದಾರರು- Associated Management of (Government Recognised Unaided English Medium) Primary and Secondary Schools in Karnataka (KAMS)

2. ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ರಾಜ್ಯ ಸರ್ಕಾರವು ಸಲ್ಲಿಸಿದ್ದ ಎಸ್.ಎಲ್.ಪಿ 18139-18163/2008 ಅನ್ನು ಸಿವಿಲ್ ಅಪೀಲ್ ಎಂದು ಪರಿಗಣಿಸಿ 5166-5190/2013 ಸಂವಿಧಾನ ಪೀಠಕ್ಕೆ ವರ್ಗಾವಣೆಗೊಂಡ ತರುವಾಯದಲ್ಲಿ ದಿ: 06.05.2014 ರಲ್ಲಿ ಹೊರಟಿರುವ ತೀರ್ಪು.
3. ದಿ: 06.05.2014 ರ ತೀರ್ಪಿನ ಕುರಿತು ಸಲ್ಲಿಸಲಾಗಿದ್ದ ಮರು ಪರಿಶೀಲನಾ ಅರ್ಜಿ ಸಂಖ್ಯೆ: 1878-1911/2014 ರಲ್ಲಿ ದಿ: 09.09.2014 ರಂದು ವಜಾ ಆದೇಶ. ನಂತರದಲ್ಲಿ ರಾಜ್ಯ ಸರ್ಕಾರ ದಾಖಲಿಸಿದ್ದ ಪರಿಹಾರಾತ್ಮಕ ಅರ್ಜಿ(Curative Petition) ಸಹ ವಜಾ ಆಗಿರುತ್ತದೆ.
4. ಅಸೋಸಿಯೇಟೆಡ್ ಮೇನೇಜ್‌ಮೆಂಟ್‌ರವರು ಸರ್ವೋಚ್ಚ ನ್ಯಾಯಾಲಯದಲ್ಲಿ ಡೈರಿ ಸಂಖ್ಯೆ: 2119/2015 ರಲ್ಲಿ ನಿಂದನಾ ದಾವೆ ದಾಖಲಿಸಿದ್ದು, ನಂತರದಲ್ಲಿ ಅದು ಎಸ್.ಎಲ್.ಪಿ(ಸಿವಿಲ್) ಸಂಖ್ಯೆ: 2744/2015 ಎಂಬುದಾಗಿ ನ್ಯಾಯಾಲಯದ ಮುಂದೆ ದಿ: 06.02.2015 ರಂದು ವಿಚಾರಣೆಗೆ ಬಂದು ಕರ್ನಾಟಕ ಉಚ್ಚ ನ್ಯಾಯಾಲಯದ ಮುಂದೆ ಮನವಿ ಮಾಡಿಕೊಳ್ಳಲು ಅಸೋಸಿಯೇಟೆಡ್ ಮೇನೇಜ್‌ಮೆಂಟ್ ರವರಿಗೆ ಸೂಚನೆಯಾಗಿದೆ.
5. ಅಂತೆಯೇ, ದಿ: 19.02.2015 ರಂದು ಅಸೋಸಿಯೇಟೆಡ್ ಮೇನೇಜ್‌ಮೆಂಟ್ ರವರು ದಾಖಲಿಸಿದ್ದ ಅರ್ಜಿಯು ವಿಚಾರಣೆಗೆ ಬಂದು ಅಂತಿಮವಾಗಿ ರಿಟ್ ಅರ್ಜಿ: 55106/2014 ದಿ:28.04.2015 ರಂದು ನ್ಯಾಯಾಲಯವು ಇತ್ಯರ್ಥಪಡಿಸಿದೆ. ಅದರಲ್ಲಿ ದಿ: 27.02.2015 ರಂದು ನ್ಯಾಯಾಲಯವು ಹೊರಡಿಸಿದ್ದ ಮಧ್ಯಂತರ ಆದೇಶವನ್ನು ದಿ: 20.05.2015 ರ ಒಳಗಾಗಿ ಅನುಷ್ಠಾನಗೊಳಿಸಲು ಸೂಚನೆಯಾಗಿದೆ.
6. ಕೆಲವು ಸಂಸ್ಥೆಗಳು ನ್ಯಾಯಾಲಯದಲ್ಲಿ ದಾಖಲಿಸಿರುವ ನಿಂದನಾ ಅರ್ಜಿಗಳ ಪ್ರಕರಣಗಳಲ್ಲಿ ನ್ಯಾಯಾಲಯವು ಸೂಚಿಸಿದಂತೆ.
7. ಸರ್ಕಾರದ ಅರೆ ಸ.ಪ.ಇಡಿ.263.ಪಿಜಿಸಿ.2015, ದಿನಾಂಕ:2.6.2015
8. ಸರ್ಕಾರದ ಅರೆ ಸ.ಪ.ಇಡಿ.255.ಪಿಜಿಸಿ.2015, ದಿನಾಂಕ:2.6.2015
9. ಏಕ ಕಡತದಲ್ಲಿನ ಸರ್ಕಾರದ ಆದೇಶ ದಿನಾಂಕ:6.6.2015
10. ಸರ್ಕಾರದ ಆದೇಶ ಇಡಿ 98 ಪಿಜಿಸಿ 2015(ಭಾಗ-2) ದಿ: 23.03.2015
11. ಈ ಕಾರ್ಯಾಲಯದ ಅಧಿಸೂಚನೆ/ಜ್ಞಾಪನಾ ಸಮಸಂಖ್ಯೆದಿ: 10.04.2015, ದಿ:24.4.2015,ದಿ:2.5.2015 ದಿ:2.6.2015, ದಿ:5.6.2015 ಹಾಗೂ ದಿ:6.6.2015
12. ಉಪನಿರ್ದೇಶಕರು, ಸಾ.ಶಿ.ಇಲಾಖೆ, ಮೈಸೂರು ಜಿಲ್ಲೆ ರವರ ಪತ್ರ ಸಂಖ್ಯೆ :ಜಿ3/7737/ಕ.ಮಾ.ಶ/ ಆಂ.ಮಾಶ ಪರಿವರ್ತನೆ /299/2014-15 ದಿ: 18/05/2015

**************

1994-95 ರಲ್ಲಿ ಜಾರಿಗೊಳಿಸಲಾದ ಭಾಷಾ ನೀತಿ ಕುರಿತಂತೆ ಹಲವು ಸಂಸ್ಥೆಗಳು ಮೊದಲಿಗೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿದ ರಿಟ್ ಅರ್ಜಿಯಲ್ಲಿ 2008ರಲ್ಲಿ ತೀರ್ಪು ಹೊರಬಿದ್ದು ನಂತರ ಸರ್ಕಾರವು ಘನ